ಕರ್ನಾಟಕ ಸರ್ಕಾರ
(ಪಿ.ಆರ್.ಪಿ.67)

ಹೇಳಿಕೆ ಹಾಳೆ
(ಆರ್.ಪಿ.ಸಂಖ್ಯೆ 57)
ನಮೂನೆ ಸಂಖ್ಯೆ 4

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್ ನ್ಯಾಯಾಧೀಶರ ನ್ಯಾಯಾಲಯ, ಹಾಸನ**

**ಸ್ಪೆಷಲ್ ಕೇಸ್ ನಂಬರ್ : 556/2025**

**ಫ್ರಾಸಾ- 1 ಚಾಸಾ- 1**

| | | |
|---|---|---|
| ಸಾಕ್ಷಿದಾರರ ಹೆಸರುಃ | : | ಚಂದ್ರಶೇಖರ ಕೆ ಎನ್ |
| ತಂದೆಯ ಹೆಸರುಃ | : | ನಾರಾಯಣ ಎಂ |
| ವಯಸ್ಸುಃ | : | 41 ವರ್ಷ |
| ಉದ್ಯೋಗಃ | : | ಸಿ ಪಿ ಐ, ಶಾಂತಿಗ್ರಾಮ ವೃತ್ತ |
| ವಾಸ | : | ಹಾಸನ |

**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ: 29-04-2026:**

**ಮುಖ್ಯ ವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ವಿಶೇಷ ಅಭಿಯೋಜಕರಿಂದಃ**

ನಾನು 13-8-25 ರಿಂದ ಶಾಂತಿಗ್ರಾಮ ವೃತ್ತದ ವೃತ್ತನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2.ದಿನಾಂಕ 12-9-25 ರಂದು ಹಾಸನ ನಗರದಲ್ಲಿ ಇದ್ದಾಗ ಬಾತ್ಮಿದಾರರು ಕರೆ ಮಾಡಿ ಸೈಯದ್ ಫೈಸಲ್, ಸಿಕಂದರ್ ಪಾಷ ಮತ್ತು ಹೀನಾ ಕೌಸರ್ ಎಂಬ ಹೆಂಗಸು ಗಾಂಜಾವನ್ನು ಎಲ್ಲಿಂದಲೋ ಖರೀದಿ ಮಾಡಿ ರೈಲು ಮತ್ತು ಬಸ್ಸುಗಳನ್ನು ಬದಲಾಯಿಸಿಕೊಂಡು ಹಾಸನಕ್ಕೆ ಬಂದು ಹಾಸನದಿಂದ ಶಾಂತಿಗ್ರಾಮಕ್ಕೆ ಬಂದು ಶಾಂತಿಗ್ರಾಮದ ರೈಲ್ವೇನಿಲ್ದಾಣದಿಂದ ಬೆಂಗಳೂರಿಗೆ ತಲುಪಿ ಮಾರಾಟ ಮಾಡಲು ಪ್ರಯತ್ನಿಸುತ್ತಿದ್ದಾರೆ ಎಂದು ತಿಳಿಸಿದರು. ನಂತರ ನಾನು ಶಾಂತಿಗ್ರಾಮ ಪೊಲೀಸ್ ಠಾಣೆಗೆ ಬಂದು ದೂರನ್ನು ಠಾಣಾಧಿಕಾರಿಗೆ ನಿಪಿ-1ರಂತೆ ನೀಡಿದೆನು. ಅದರಲ್ಲಿ ನನ್ನ ರುಜು ಇದ್ದು ನಿಪಿ-1(ಎ) ಎಂದು ಗುರುತಿಸಲಾಯಿತು. ನಂತರ ಠಾಣಾಧಿಕಾರಿ ಚಾಸಾ-18ರವರು ಪ್ರ.ವ.ವ. ದಾಖಲಿಸಿದರು.

3.ಅದೇ ದಿನಾಂಕದಂದು ಚಾಸಾ-18ರವರು, ಚಾಸಾ-1 ರಿಂದ 3 ರವರನ್ನು ಠಾಣೆಗೆ ಕರೆಸಿ ಅವರಿಗೆ ದೂರು ದಾಖಲಾಗಿರುವ ಬಗ್ಗೆ ವಿಚಾರ ತಿಳಿಸಿ ದಾಳಿಗೆ ಹೋಗಬೇಕಾಗಿರುವ ಬಗ್ಗೆ ಪಂಚರಾಗಿ ಸಹಕರಿಸಬೇಕೆಂದು ತಿಳಿಸಿದರು.

3.ನ್ಯಾಯಾಲಯದಿಂದ ಶೋಧನಾ ವಾರೆಂಟ್ ಪಡೆಯಲು ಸಮಯ ಇಲ್ಲದಿದ್ದುದರಿಂದ ಮೇಲಧಿಕಾರಿಗಳಿಗೆ ಚಾಸಾ-18ರವರು ವಿಚಾರ ತಿಳಿಸಿ ಅವರಿಂದ ದಾಳಿ ನಡೆಸುವ ಸಲುವಾಗಿ ಅಧಿಕಾರ ಪತ್ರವನ್ನು ಪಡೆದು ದಿನಚರಿಯಲ್ಲಿ ನಮೂದಿಸಿ ಜಿಲ್ಲಾ ನಿಸ್ತಂತು ವಿಭಾಗಕ್ಕೆ ಮಾಹಿತಿ ನೀಡಿದರು. ಪಂಚರೊಂದಿಗೆ ಮತ್ತು ಠಾಣಾ ಸಿಬ್ಬಂದಿಗಳಾದ ಚಾಸಾ-7 ರಿಂದ 9ರವರನ್ನು ಮತ್ತು ಚಾಸಾ-10 ಹಾಗೂ ಚಾಸಾ-6ರವರನ್ನು ಡಿವೈ ಎಸ್ ಪಿ ಆಗಿದ್ದ ಚಾಸಾ-2 ರವರನ್ನು ಕರೆದುಕೊಂಡು ಚಾಸಾ-18ರವರು ಮಾಹಿತಿ ಸ್ಥಳವಾದ ರಂಗನಾಥಪುರ ಗ್ರಾಮದ ಕಡೆಗೆ ಕರೆದುಕೊಂಡು ಹೋದರು. ಅಲ್ಲಿ ಶಾಂತಿಗ್ರಾಮ ರೈಲ್ವೇ ನಿಲ್ದಾಣದ ಬಳಿ ಹೋಗಿ ಇಲಾಖಾ ವಾಹನವನ್ನು ಮರೆಯಲ್ಲಿ ನಿಲ್ಲಿಸಿ ಕಾಯುತ್ತಾ ನಿಂತಿದ್ದೆವು. ಸುಮಾರು 12-35 ಗಂಟೆಗೆ ರಾಷ್ಟ್ರೀಯ ಹೆದ್ದಾರಿ 75 ರಿಂದ ಇಬ್ಬರು ಗಂಡಸರು, ಓರ್ವ ಹೆಂಗಸು ರಂಗನಾಥಪುರ ರೈಲ್ವೇ ನಿಲ್ದಾಣದ ಕಡೆಗೆ ಬ್ಯಾಗುಗಳನ್ನು ಹಾಕಿಕೊಂಡು ನಡೆದುಕೊಂಡು ಬರುತ್ತಿದ್ದರು. ನಾವು ಅವರನ್ನು ಕೇಳಲು ಹೋದಾಗ ಅನುಮಾನದಿಂದ ವರ್ತಿಸಿದರು. ನಂತರ ಸಿಬ್ಬಂದಿಗಳ ಸಹಾಯದಿಂದ ಅವರನ್ನು ಸುತ್ತುವರಿದು ಅವರ ಹೆಸರು ವಿಳಾಸ ಕೇಳಿದಾಗ ಸೈಯದ್ ಫೈಸಲ್ ತಂದೆ ಇಸ್ಮಾಯಿಲ್, ಸಿಕಂದರ್ ಪಾಷಾ, ಬಿನ್ ಚಾಂದ್ ಪಾಷಾ, ಹೀನಾ ಕೌಸರ್ ಕೋಂ ತೌಸಿಫ್ ಅಹಮದ್ ಎಂದು ತಿಳಿಸಿದರು. ಅವರಿಗೆ ಬಂದ ಮಾಹಿತಿ ಬಗ್ಗೆ ತಿಳಿಸಿದಾಗ ಅವರು ಅನುಮಾನಾಸ್ಪದವಾಗಿ ವರ್ತಿಸಿದರು. ನಂತರ ನಾವು ಪಂಚರು ಪರಸ್ಪರ ಅಂಗಶೋಧನೆ ಮಾಡಿಕೊಂಡು ನಮ್ಮ ಬಳಿಯಾವುದೇ ಗಾಂಜಾ ಇಲ್ಲವೆಂದು ಖಚಿತಪಡಿಸಿಕೊಂಡೆವು. ನಂತರ ಚಾಸಾ-18ರವರು ಆರೋಪಿತರಿಗೆ ಚಾಸಾ-2ರವರನ್ನು ತೋರಿಸಿ ಆರೋಪಿತರಿಗೆ ಅವರ ಪರಿಚಯ ಮಾಡಿಕೊಟ್ಟು ಇವರು ಪತ್ರಾಂಕಿತ ಅಧಿಕಾರಿಯಾಗಿದ್ದುಇವರ ಸಮಕ್ಷಮ ಶೋಧನೆ ಮಾಡಲು ಒಪ್ಪಿಗೆ ಇದೆಯಾ ಅಥವಾ ನ್ಯಾಯಾಧೀಶರ ಮುಂದೆ ಶೋಧಿಸಬೇಕೇ ಎಂದು ಕೇಳಿದಾಗ ಆರೋಪಿತರು

ಚಾಸಾ-2 ರವರ ಮುಂದೆ ಶೋಧಿಸಲು ಒಪ್ಪಿಕೊಂಡರು.

4.ನಂತರ ಚಾಸಾ-2 ರವರು ಸೈಯದ್ ಫೈಸಲ್ ಬೆನ್ನಿಗೆ ನೇತುಹಾಕಿಕೊಂಡಿದ್ದ ಸಿಮೆಂಟ್ ಬಣ್ಣದ ಬ್ಯಾಗನ್ನು ಕೆಳಗೆ ಇಳಿಸಿ ಅಂಗಶೋಧನೆ ಮಾಡಿದಾಗ ಅವರ ದೇಹದಲ್ಲಿ ಯಾವುದೇ ವಸ್ತುಗಳು ಕಂಡುಬರಲಿಲ್ಲ. ಸದರಿ ಬ್ಯಾಗನ್ನು ಪರಿಶೀಲಿಸಿದಾಗ ಸ್ಕೈಬ್ಯಾಗ್ Sports ಎಂದು ಬರೆದಿತ್ತು. ಸದರಿ ಬ್ಯಾಗಿನ ಒಳಗಡೆ ಕಪ್ಪುಬಣ್ಣದ ಲುಂಗಿ ಸುತ್ತಿದ್ದು ಅದನ್ನು ತೆರೆದು ನೋಡಿದಾಗ ಖಾಕಿ ಬಣ್ಣದ ಟೇಪನ್ನು ಸುತ್ತಿರುವ ಒಂದು ಬಂಡಲ್ ಇತ್ತು. ಅದನ್ನು ತನಿಖಾಧಿಕಾರಿ ಮತ್ತು ಚಾಸಾ-10 ರವರು ಕಟ್ ಮಾಡಿ ನೋಡಿದಾಗ ಅದು ಬಿಳಿ ಪಂಚೆಯಾಗಿದ್ದು ಒತ್ತಡ ಹಾಕಿ ಕುಗ್ಗಿಸಿ ಪಿಂಡಿ ಮಾಡಿರುವ ಒಂದು ಬಂಡಲ್ ಆಗಿತ್ತು. ಅದರಲ್ಲಿ ಎಲೆ, ಮೊಗ್ಗು, ಬೀಜ, ಕಾಂಡ ಸೊಪ್ಪಿನಿಂದ ಕೂಡಿರುವ ರೆಂಬೆಗಳ ಗಾಂಜಾ ಇತ್ತು. ಅದನ್ನು ಚಾಸಾ-10 ಮತ್ತು ತನಿಖಾಧಿಕಾರಿ ಪರಿಶೀಲಿಸಿ ಅದು ಗಾಂಜಾ ಸೊಪ್ಪು ತರಹ ಇರಬಹುದೆಂದು ತಿಳಿಸಿದರು. ನಂತರ ತೂಕಯಂತ್ರದ ಮೂಲಕ ಚಾಸಾ-5ರವರು ತೂಕ ಮಾಡಿದಾಗ 10.600ಕೆಜಿ ಇತ್ತು. ಅದನ್ನು ಒಂದು ಬಿಳಿ ಬಟ್ಟೆಯ ಚೀಲದಲ್ಲಿ ಹಾಕಿ ಪ್ಯಾಕು ಮಾಡಿ ಸೀಲು ಮಾಡಿ ತೂಕ ಮಾದಾಗ 10.740ಕಿಗ್ರಾಂ ಇತ್ತು.

| 5.ನಂತರ ಚಾಸಾ-2 ರವರು ಸಿಕಂದರ್ ಪಾಷಾ ಬೆನ್ನಿಗೆ ನೇತುಹಾಕಿಕೊಂಡಿದ್ದ ಸಿಮೆಂಟ್ ಬಣ್ಣದ ಬ್ಯಾಗನ್ನು ಕೆಳಗೆ ಇಳಿಸಿ ಅಂಗಶೋಧನೆ ಮಾಡಿದಾಗ ಅವರ ದೇಹದಲ್ಲಿ ಯಾವುದೇ ವಸ್ತುಗಳು ಕಂಡುಬರಲಿಲ್ಲ. ಸದರಿ ಬ್ಯಾಗನ್ನು ಪರಿಶೀಲಿಸಿದಾಗ ಸ್ಕೈಬ್ಯಾಗ್ Sports ಎಂದು ಬರೆದಿತ್ತು. ಸದರಿ ಬ್ಯಾಗಿನ ಒಳಗಡೆ ಕಪ್ಪುಬಣ್ಣದ ಲುಂಗಿ ಸುತ್ತಿದ್ದು ಅದನ್ನು ತೆರೆದು ನೋಡಿದಾಗ ಖಾಕಿ ಬಣ್ಣದ ಟೇಪನ್ನು ಸುತ್ತಿರುವ ಒಂದು ಬಂಡಲ್ ಇತ್ತು. ಅದನ್ನು ತನಿಖಾಧಿಕಾರಿ ಮತ್ತು ಚಾಸಾ-10 ರವರು ಕಟ್ ಮಾಡಿ ನೋಡಿದಾಗ ಅದು ಬಿಳಿ ಪಂಚೆಯಾಗಿದ್ದು ಒತ್ತಡ ಹಾಕಿ ಕುಗ್ಗಿಸಿ ಪಿಂಡಿ ಮಾಡಿರುವ ಒಂದು ಬಂಡಲ್ ಆಗಿತ್ತು. ಅದರಲ್ಲಿ ಎಲೆ, ಮೊಗ್ಗು, ಬೀಜ, ಕಾಂಡ ಸೊಪ್ಪಿನಿಂದ ಕೂಡಿರುವ ರೆಂಬೆಗಳ ಗಾಂಜಾ ಇತ್ತು. ಅದನ್ನು ಚಾಸಾ-10 ಮತ್ತು ತನಿಖಾಧಿಕಾರಿ ಪರಿಶೀಲಿಸಿ ಅದು ಗಾಂಜಾ ಸೊಪ್ಪು ತರಹ ಇರಬಹುದೆಂದು ತಿಳಿಸಿದರು. ನಂತರ ತೂಕಯಂತ್ರದ ಮೂಲಕ ಚಾಸಾ-5ರವರು ತೂಕ ಮಾಡಿದಾಗ 10.220ಕೆಜಿ

ಇತ್ತು. ಅದನ್ನು ಒಂದು ಬಿಳಿ ಬಟ್ಟೆಯ ಚೀಲದಲ್ಲಿ ಹಾಕಿ ಪ್ಯಾಕು ಮಾಡಿ ಸೀಲು ಮಾಡಿ ತೂಕ ಮಾದಾಗ 10.3400ಕಿಗ್ರಾಂ ಇತ್ತು.

4.ನಂತರ ಚಾಸಾ-6ರವರು ಹೀನಾ ಕೌಸರ್ ರವರನ್ನು ಬೆನ್ನಿಗೆ ನೇತುಹಾಕಿಕೊಂಡಿದ್ದ ಪರ್ಪಲ್ ಬಣ್ಣದ ಬ್ಯಾಗನ್ನು ಕೆಳಗೆ ಇಳಿಸಿ ಅಂಗಶೋಧನೆ ಮಾಡಿದಾಗ ಅವರ ದೇಹದಲ್ಲಿ ಯಾವುದೇ ವಸ್ತುಗಳು ಕಂಡುಬರಲಿಲ್ಲ. ಸದರಿ ಬ್ಯಾಗನ್ನು ಪರಿಶೀಲಿಸಿದಾಗ ನ್ಯೂ ಗುಡ್ವಿನ್ ಎಂದು ಬರೆದಿತ್ತು. ಸದರಿ ಬ್ಯಾಗಿನ ಒಳಗಡೆ ಮೆರೂನ್ ಬಣ್ಣದ ಪಂಚೆ ಸುತ್ತಿದ್ದು ಅದನ್ನು ತೆರೆದು ನೋಡಿದಾಗ ಖಾಕಿ ಬಣ್ಣದ ಟೇಪನ್ನು ಸುತ್ತಿರುವ ಒಂದು ಬಂಡಲ್ ಇತ್ತು. ಅದನ್ನು ತನಿಖಾಧಿಕಾರಿ ಮತ್ತು ಚಾಸಾ-10 ರವರು ಕಟ್ ಮಾಡಿ ನೋಡಿದಾಗ ಅದು ಬಿಳಿ ಪಂಚೆಯಾಗಿದ್ದು ಒತ್ತಡ ಹಾಕಿ ಕುಗ್ಗಿಸಿ ಪಿಂಡಿ ಮಾಡಿರುವ ಒಂದು ಬಂಡಲ್ ಆಗಿತ್ತು. ಅದರಲ್ಲಿ ಎಲೆ, ಮೊಗ್ಗು, ಬೀಜ, ಕಾಂಡ ಸೊಪ್ಪಿನಿಂದ ಕೂಡಿರುವ ರೆಂಬೆಗಳ ಗಾಂಜಾ ಇತ್ತು. ಅದನ್ನು ಚಾಸಾ-10 ಮತ್ತು ತನಿಖಾಧಿಕಾರಿ ಪರಿಶೀಲಿಸಿ ಅದು ಗಾಂಜಾ ಸೊಪ್ಪು ತರಹ ಇರಬಹುದೆಂದು ತಿಳಿಸಿದರು. ನಂತರ ತೂಕಯಂತ್ರದ ಮೂಲಕ ಚಾಸಾ-5ರವರು ತೂಕ ಮಾಡಿದಾಗ 10.300ಕೆಜಿ ಇತ್ತು. ಅದನ್ನು ಒಂದು ಬಿಳಿ ಬಟ್ಟೆಯ ಚೀಲದಲ್ಲಿ ಹಾಕಿ ಪ್ಯಾಕು ಮಾಡಿ ಸೀಲು ಮಾಡಿ ತೂಕ ಮಾದಾಗ 10.410ಕಿಗ್ರಾಂ ಇತ್ತು.

5.ಮೂರೂ ಜನರ ಬಳಿ ಇದ್ದ ಗಾಂಜಾವನ್ನು ಒಟ್ಟಿಗೆ ತೂಕ ಹಾಕಿದಾಗ 31.500ಕೆಜಿ ಇತ್ತು. ಅದರ ಮೌಲ್ಯ ಅಂದಾಜು 12,40,000ರೂಪಾಯಿ ಆಗಬಹುದೆಂದು ಪಂಚರು ಅಭಿಪ್ರಾಯಪಟ್ಟರು.

6.ಆ ಮೂರೂ ಜನರಲ್ಲಿ ಅವುಗಳನ್ನು ಎಲ್ಲಿಂದ ತಂದಿರುವುದಾಗಿ ಕೇಳಿದಾಗ ಬೇರೆ ಬೇರೆ ಕಡೆಯಿಂದ ತಂದು ಬೆಂಗಳೂರಿಗೆ ತೆಗೆದುಕೊಂಡು ಹೋಗಿ ಮಾರಾಟ ಮಾಡಲು ಅರಸೀಕೆರೆಯಿಂದ ಹಾಸನಕ್ಕೆ ಬಂದು ಅಲ್ಲಿಂದ ಶಾಂತಿಗ್ರಾಮಕ್ಕೆ ಆಟೋದಲ್ಲಿ ಬಂದು ರೈಲಿನ ಮೂಲಕ ಬೆಂಗಳೂರಿಗೆ ತೆರಳಲು ಬಂದಿರುವುದಾಗಿ ತಿಳಿಸಿದರು. ಇವೆಲ್ಲ ವಸ್ತುಗಳನ್ನು ವಶಪಡಿಸಿಕೊಂಡು ತನಿಖಾಧಿಕಾರಿ ನಿಪಿ-2

ರಂತೆ ಪಂಚನಾಮೆ ನಡೆಸಿದರು. ಅದಕ್ಕೆ ನಾನು ಸಹಿ ಹಾಕಿರುತ್ತೇನೆ. ಅದರಲ್ಲಿ ನನ್ನ ರುಜು ಇದ್ದು ನಿಪಿ-2(ಎ) ಎಂದು ಗುರುತಿಸಲಾಯಿತು. ನಂತರ ವಶಪಡಿಸಿಕೊಂಡ ಮಾಲುಗಳು ಹಾಗೂ ಆರೊಪಿತರೊಂದಿಗೆ ಠಾಣೆಗೆ ಬಂದೆವು. ಸ್ಥಳದಲ್ಲಿ ಆರೋಪಿತರಲ್ಲಿ ಆ ವಸ್ತುಗಳನ್ನು ಹೊಂದಲು ಪರವಾನಿಗೆ ಇದೆಯಾ ಎಂದು ಕೇಳಿದಾಗ ಇಲ್ಲ ಎಂದು ತಿಳಿಸಿದರು. ಆ ಮೂರೂ ಜನರನ್ನು ನೋಡಿದರೆ ಗುರುತಿಸುತ್ತೇನೆ. ಅವರು ನ್ಯಾಯಾಲಯದ ಮುಂದೆ ಇದ್ದಾರೆ. ಪಂಚನಾಮೆ ಕಾಲದಲ್ಲಿ ಫೋಟೋ ವೀಡಿಯೋ ಮಾಡಿಸಿಕೊಂಡಿರುತ್ತಾರೆ. ಈಗ ತೋರಿಸಿದ 6 ಫೋಟೋಗಳನ್ನು ಮಹಜರ್ ಕಾಲದಲ್ಲಿ ಸ್ಥಳದಲ್ಲಿ ತೆಗೆಯಲಾಗಿದೆ. ಅವುಗಳನ್ನು ನಿಪಿ-3 ರಿಂದ 8 ಎಂದು ಗುರುತಿಸಲಾಯಿತು. ವಶಪಡಿಸಿಕೊಂಡ ಮಾಲುಗಳನ್ನು ನೋಡಿದರೆ ಗುರುತಿಸುತ್ತೇನೆ. ನ್ಯಾಯಾಲಯದ ಮುಂದಿರುವ ಸಿಮೆಂಟ್ ಬಣ್ಣದ skybag sports ಎಂದು ಬರೆದಿರುವ ಬ್ಯಾಗನ್ನು ನೋಡುತ್ತಿದ್ದು **ಎಂ.ಒ.1** ಎಂದು ಗುರುತಿಸಲಾಯಿತು. ಆ ದಿವಸ ಅದರೊಳಗಿದ್ದ ಕಪ್ಪು ಬಣ್ಣದ ಪಂಚೆಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಗುರುತಿಸಿದ ಪಂಚೆಯನ್ನ **ಎಂ.ಒ.2** ಎಂದು ಗುರುಸಲಾಯಿತು. ನೀಲಿ ಬಣ್ಣದ skybag sports ಬ್ಯಾಗನ್ನು ನೋಡುತ್ತಿದ್ದು ಅದನ್ನು **ಎಂ.ಒ.3** ಎಂದು ಗುರುತಿಸಲಾಯಿತು. ಅದರಲ್ಲಿದ್ದ ಪಂಚೆಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಗುರುತಿಸಿದ ಪಂಚೆಯನ್ನು **ಎಂ.ಒ.4** ಎಂದು ಗುರುತಿಸಲಾಯಿತು. ನೇರಳೆ ಬಣ್ಣದ newgoodwin ಹೆಸರಿನ ಬ್ಯಾಗನ್ನು ನೋಡುತ್ತಿದ್ದು **ಎಂ.ಒ.5** ಎಂದು ಗುರುತಿಸಲಾಯಿತು. ಅದರಲ್ಲಿದ್ದ ಮೆರೂನ್ ಬಣ್ಣದ ಪಂಚೆ ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಗುರುತಿಸಿದ ಪಂಚೆಯನ್ನು **ಎಂ.ಒ.6** ಎಂದು ಗುರುತಿಸಲಾಯಿತು.

ವಶಪಡಿಸಿಕೊಂಡ ಗಾಂಜಾ ನೋಡಿದರೆ ಗುರುತಿಸುತ್ತೇನೆ. (ಮಾನ್ಯ ಅಭಿಯೋಜಕರು ನ್ಯಾಯಾಲಯದ ಮುಂದೆ ಇರುವ ಬಟ್ಟೆಯಿಂದ ಪ್ಯಾಕು ಮಾಡಿ ಸೀಲು ಮಾಡಿರುವ 3 ಪ್ಯಾಕೇಟನ್ನು ಒಡೆಯಲು ಅನುಮತಿ ಕೋರಿದ್ದು, ಅನುಮತಿ ನೀಡಿದೆ) ಬಟ್ಟೆಯಿಂದ ಪ್ಯಾಕು ಮಾಡಿದ ಸೀಲಾದ ಪ್ಯಾಕನ್ನು ತೆರೆದು ಅದರೊಳಗಿರುವ ವಸ್ತುವನ್ನು ತೋರಿಸಿದಾಗ ನೋಡಿ ಇದೆ ಎಂದು ಗುರುತಿಸಿರುತ್ತಾರೆ. ಅವುಗಳನ್ನು **ಎಂ.ಒ.7 ರಿಂದ 9** ಎಂದು ಗುರುತಿಸಲಾಯಿತು.

**<u>ಪಾಟೀಸವಾಲುಃ ಆರೋಪಿತರ ಪರ ವಕೀಲರಿಂದಃ</u>**

(ನ್ಯಾಯಾಲಯದ ಬೆಳಗಿನ ಕಲಾಪದ ವೇಳೆ ಮುಗಿದಿದ್ದರಿಂದ ಮಧ್ಯಾಹ್ನಕ್ಕೆ ಮುಂದೂಡಲಾಗಿದೆ)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್**

**ನ್ಯಾಯಾಧೀಶರು, ಹಾಸನ.**

**<u>ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಬೋಧಿಸಿದೆಃ</u>**

**<u>ಪಾಟೀಸವಾಲುಃ 2 ಮತ್ತು 3ನೇ ಆರೋಪಿತರ ಪರ ಶ್ರೀ ಕೆ ಜೆ ಟಿ ವಕೀಲರಿಂದಃ</u>**

ಬೆಳಿಗ್ಗೆ 9-30 ಗಂಟೆಗೆ ನನಗೆ ಮಾಹಿತಿ ಬಂದಿದೆ. ಆ ಸಮಯದಲ್ಲಿ ನಾನು ಮನೆಯಿಂದ ಕಛೇರಿ ಕಡೆಗೆ ಹೋಗುತ್ತಿದ್ದೆನು. ಮಾಹಿತಿ ಬಂದ ನಂತರ ನಾನು ಸೀದ ಶಾಂತಿಗ್ರಾಮ ಪೊಲೀಸ್ ಠಾಣೆಗೆ ಹೋದೆನು. ಮಾಹಿತಿ ಬಂದ ನಂತರ ನನಗೆ ಅದನ್ನು ಠಾಣಾ ಡೈರಿಯಲ್ಲಿ ನಮೂದು ಮಾಡಿ ನಂತರ ಮುಂದುವರೆಯಲು ತೊಂದರೆ ಇತ್ತಾ ಎಂದರೆ ಸಾಕ್ಷಿಯು ನಾನು ಠಾಣಾಧಿಕಾರಿ ಆಗಿಲ್ಲದಿದ್ದುದರಿಂದ ಕೇಸು ದಾಖಲು ಮಾಡುವ ಸಲುವಾಗಿ ವರದಿ ನೀಡಿರುತ್ತೇನೆ ಎನ್ನುತ್ತಾರೆ. ನಾನು ದೂರು ಕೊಟ್ಟ ನಂತರ ಮೇಲಧಿಕಾರಿಗಳಿಗೆ ಮಾಹಿತಿ ತಿಳಿಸಿದೆನು. ಶಾಂತಿಗ್ರಾಮ ಪೊಲೀಸ್ ಠಾಣೆಯಲ್ಲಿ ನಾನು ಬೆಳಿಗ್ಗೆ 10-10 ಗಂಟೆಗೆ ದೂರು ನೀಡಿರುತ್ತೇನೆ. ಆ ದೂರನ್ನು ಶಾಂತಿಗ್ರಾಮ ಪೊಲೀಸ್ ಠಾಣೆಯ ಸಿಬ್ಬಂದಿ ಮೂಲಕ ನಾನು ಹೇಳಿ ಟೈಪ್ ಮಾಡಿಸಿರುತ್ತೇನೆ. ನಿಪಿ-1 ರಲ್ಲಿ ಈ ಮಾಹಿತಿ ಇಲ್ಲ ಎಂದರೆ ಸರಿ. ನಾನು ಶಾಂತಿಗ್ರಾಮ ಠಾಣೆಗೆ ಹೋದ ನಂತರ ಪಿಎಸ್ಐ ರವರಿಗೆ ದೂರು ನೀಡಿದೆನು. ನಾನು ದೂರು ಕೊಟ್ಟ ತಕ್ಷಣವೇ ಪ್ರ.ವ.ವ. ದಾಖಲಿಸಿದರು. ದೂರುಕೊಟ್ಟ 15 -20 ನಿಮಿಷದಲ್ಲಿ ಪ್ರ.ವ.ವ. ದಾಖಲಿಸಿದರು. ಠಾಣೆಗೆ ನಾನು 9-50ಕ್ಕೆ ತಲುಪಿದೆನು.

2.ದೂರು ಕೊಟ್ಟ ನಂತರ ಚಾಸಾ-18ರವರು ಪ್ರ.ವ.ವ. ದಾಖಲಿಸಿದ ನಂತರ ಸದರಿಯವರಿಗೆ ನಾನು ದಾಳಿ ಪ್ರಕ್ರಿಯೆ ನಡೆಸುವಂತೆ ಸೂಚನೆ ನೀಡಿದ್ದೇನಾ ಎಂದರೆ ಸಾಕ್ಷಿಯು

ದೂರನ್ನು ನೀಡಿ ಅವರಿಗೆ ಕೇಸು ದಾಖಲಿಸಿ ಮುಂದಿನ ಪ್ರಕ್ರಿಯೆ ನಡೆಸುವಂತೆ ಸೂಚಿಸಿರುತ್ತೇನೆ, ಲಿಖಿತವಾಗಿ ನೀಡಿಲ್ಲ ಎನ್ನುತ್ತಾರೆ. ಫೋನ್ ಮೂಲಕ ಪೊಲೀಸ್ ಉಪಾಧೀಕ್ಷಕರಿಗೆ ತಿಳಿಸಿರುತ್ತೇನೆ. ಆಗ ಸಮಯ 10-10 ಕಳೆದಿತ್ತು.

3.ಪಂಚರಿಗೆ ಚಾಸಾ18ರವರು ಲಿಖಿತ ನೋಟೀಸನ್ನು ಜಾರಿಗೊಳಿಸಿರುತ್ತಾರೆ. ಚಾಸಾ-18 ರವರು ಶೋಧನಾ ವಾರೆಂಟನ್ನು ಪಡೆಯಲು ಸಮಯ ಇಲ್ಲದೇ ಇದ್ದುದರಿಂದ ಮೇಲಧಿಕಾರಿಗಳಿಗೆ ವಿಷಯವನ್ನು ತಿಳಿಸಿ ದಿನಚರಿಯಲ್ಲಿ ನಮೂದಿಸಿ ನಿಸ್ತಂತು ವಿಭಾಗಕ್ಕೆ ಮಾಹಿತಿ ನೀಡುವಾಗ ಸಮಯ ಎಷ್ಟಾಗಿತ್ತು ಎಂದರೆ ಸಾಕ್ಷಿಯು 10-40ರ ಒಳಗಡೆ ಎನ್ನುತ್ತಾರೆ. ರಂಗನಾಥಪುರ ಗ್ರಾಮದ ಕಡೆಗೆ ಡಿ ವೈ ಎಸ್ ಪಿ ರವರು, ಪಂಚರಾದ ಚಾಸಾ-2, 3, ಮತ್ತು ಸಿಬ್ಬಂದಿಗಳಾದ ಚಾಸಾ-7 ರಿಂದ 9, ಚಾಸಾ-6ರವರು ಹೋದೆವು. ಪೊಲೀಸ್ ಉಪಾಧೀಕ್ಷಕರ ಕಛೇರಿಗೆ ಸೇರಿದ ಇಲಾಖಾ ಜೀಪು ಮತ್ತು ಪಿಎಸ್ಐ ರವರಿಗೆಸೇರಿದ ಇಲಾಖಾ ಜೀಪಿನಲ್ಲಿ ಹೋದೆವು. ನಾವು ಶಾಂತಿಗ್ರಾಮ ರೈಲ್ವೆ ನಿಲ್ದಾಣದ ಬಳಿ ಹೋಗಿ ಕಾಯುತ್ತಾ ನಿಂತಿದ್ದಾಗ ಸಮಯ ಸುಮಾರು 12 ರಿಂದ 12-20 ಗಂಟೆ ಆಗಿರಬಹುದು. ಇಬ್ಬರು ಗಂಡಸರು ಮತ್ತು ಓರ್ವ ಹೆಂಗಸು ಬ್ಯಾಗುಗಳನ್ನು ಹಿಡಿದುಕೊಂಡು ನಡೆದುಕೊಂಡು ಬರುತ್ತಿರುವುದನ್ನು ಗಮನಿಸಿದೆವು. ಆರೋಪಿತರ ಅಂಗಶೋಧನೆ ಮಾಡುವ ಸಲುವಾಗಿ ಅವರು ಅನುಮತಿಯನ್ನು ಪಡೆದುಕೊಂಡೆವು. ನಾನು ಹೇಳಿದಂತೆ ಅನುಮತಿ ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ಅವರ ಅಂಗಶೋಧನೆಗೆ ಸಂಬಂಧಪಟ್ಟಂತೆ ಸ್ಥಳದಲ್ಲಿ ಪ್ರತ್ಯೇಕ ಪಂಚನಾಮೆ ನಡೆಸಿಲ್ಲ. ಆ ರೀತಿ ಅಂಗಶೋಧನೆ ಪಂಚನಾಮೆ ಪ್ರತ್ಯೇಕ ನಡೆಸಲು ತೊಂದರೆ ಇರಲಿಲ್ಲ ಎಂದರೆ ಸರಿ. ಸ್ಥಳದಲ್ಲಿ ಇದ್ದಂತಹ ಸಾರ್ವಜನಿಕರಿಗೆ ಅಂಗಶೋಧನೆಗೆ ಹಾಜರಿರುವಂತೆ ನೋಟೀಸು ಕೊಟ್ಟು ಕರೆಸಲು ತೊಂದರೆ ಇತ್ತಾ ಎಂದರೆ ಸಾಕ್ಷಿಯು ಸ್ಥಳದಲ್ಲಿ ಯಾರೂ ಸಾರ್ವಜನಿಕರು ಇರಲಿಲ್ಲ ಎನ್ನುತ್ತಾರೆ. ಅದು ರೈಲ್ವೆ ನಿಲ್ದಾಣ ಸ್ಥಳವಾದ್ದರಿಂದ ಸಾರ್ವಜನಿಕರು ಓಡಾಡುತ್ತಿರುತ್ತಾರೆ ಎಂದರೆ ಸಾಕ್ಷಿಯು ಹೌದು, ಆದರೆ ಆ ಸಮಯದಲ್ಲಿ ಯಾರೂ ಇರಲಿಲ್ಲ ಎನ್ನುತ್ತಾರೆ. ಚಾಸಾ-18ರವರು ಆರೋಪಿತರಿಗೆ ಚಾಸಾ-2 ರವರನ್ನು ತೋರಿಸಿ ಸದರಿಯವರು ಪತ್ರಾಂಕಿತ ಅಧಿಕಾರಿಯಾಗಿದ್ದು ಅವರ ಸಮಕ್ಷಮ ಅಂಗಶೋಧನೆ ಮಾಡಲು ಒಪ್ಪಿಗೆ ಇದೆಯಾ ಅಥವಾ ನ್ಯಾಯಾಧೀಶರ ಮುಂದೆ ಶೋಧಿಸಬೇಕೇ ಎಂದು ಕೇಳಿಲ್ಲ ಎಂದರೆ ಸರಿಯಲ್ಲ. ಚಾಸಾ-2 ರವರು 2ನೇ ಆರೋಪಿತರ ಅಂಗಶೋಧನೆ ಮಾಡುವಾಗ ಚಾಸಾ-10ರವರ

ಹಾಜರಿದ್ದರೆನ್ನುವುದು ಸುಳ್ಳು ಎಂದರೆ ಸರಿಯಲ್ಲ. ನನ್ನ ಮುಖ್ಯವಿಚಾರಣೆಯಲ್ಲಿ ಹೇಳಿದಂತೆ 2ನೇ ಆರೋಪಿತರಿಂದ ಎಂ.ಒ.1ರ ಬ್ಯಾಗನ್ನು ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಆ ಬ್ಯಾಗಿನ ಒಳಗಡೆ ಕಪ್ಪುಬಣ್ಣದ ಲುಂಗಿ ಸುತ್ತಿದ್ದು ಇತ್ತು ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. ತೂಕಮಾಪನವನ್ನು ಎಲ್ಲಿಂದ ತಂದದ್ದೆಂದು ಮಹಜರಿನಲ್ಲಿ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಆ ತೂಕಮಾಪನ ಸರಿಯಾಗಿತ್ತೋ ಎನ್ನುವ ಬಗ್ಗೆ ತೂಕಮಾಪನ ಇಲಾಖೆಯಿಂದ ದೃಢಪತ್ರ ಪಡೆದುಕೊಂಡಿದ್ದೇವಾ ಎಂದರೆ ಸಾಕ್ಷಿಯು ಆ ಸಮಯದಲ್ಲಿ ತೆಗೆದುಕೊಂಡಿಲ್ಲ ಆದರೆ ಸ್ಥಳದಲ್ಲಿ ಅದನ್ನು ಪಂಚರ ಸಮಕ್ಷಮ ಸರಿಯಾಗಿದೆಯೇ ಪರೀಕ್ಷಿಯೇ ತೂಕಮಾಡಿದ್ದು ಎನ್ನುತ್ತಾರೆ. ಆ ನಂತರದಲ್ಲಿ ದೃಢಪತ್ರ ಪಡೆದಿದ್ದೀರಾ ಎಂದರೆ ನಾನು ಪಡೆದುಕೊಂಡಿಲ್ಲ. ಆ ತೂಕಮಾಪನ ಯಾವ ಕಂಪೆನಿಯದೆಂದು ಮಹಜರಿನಲ್ಲಿ ನಮೂದು ಮಾಡಿರುತ್ತೇವೆ.

4.ಅದೇ ರೀತಿ 3ನೇ ಆರೋಪಿತರನ್ನು ಚಾಸಾ-2 ರವರು ಪರಿಶೀಲಿಸಿದರು ಅಂಗಶೋಧನೆ ಮಾಡಿದರು ಮತ್ತು ಅವರ ಬಳಿ ಎಂ.ಒ,3 ರ ಬ್ಯಾಗು ಇತ್ತು ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. ಚಾಸಾ-10ರವರು ಟೇಪನ್ನು ಕಟ್ ಮಾಡಿದರು, ನಂತರ ಅದರಲ್ಲಿದ್ದ ವಸ್ತುವನ್ನು ಚಾಸಾ-5 ರವರು ತೂಕಮಾಡಿದರು ಎನ್ನುವುದು ಸುಳ್ಳು ಎಂದರೆ ಸರಿಯಲ್ಲ.

5.ಆರೋಪಿತರು ಅರಸೀಕೆರೆಯಿಂದ ಹಾಸನಕ್ಕೆ ಬಂದರು ಎನ್ನುವ ಬಗ್ಗೆ ಅವರಿಂದ ದಾಖಲೆ ಪಡೆದುಕೊಂಡಿದ್ದೇವಾ ಎಂದರೆ ಪಡೆದುಕೊಂಡಿಲ್ಲ. ರಾಮನಗರದಿಂದ ಅವರು ಅರಸೀಕೆರೆಗೆ ಹೇಗೆ ಬಂದರೆಂದು ನಾನು ವಿಚಾರ ಮಾಡಿಲ್ಲ. ಅವರು ಅರಸೀಕೆಯಿಂದ ಹಾಸನಕ್ಕೆ ಎಲ್ಲಿಗೆ ಬಂದು, ಎಲ್ಲಿಂದ ಆಟೋ ಹಿಡಿದರೆಂದು ನಾನು ವಿಚಾರಣೆ ಮಾಡಲಿಲ್ಲ. ಅವರ ಬಳಿ ಇದ್ದ ಮೊಬೈಲನ್ನು ನಾನು ವಶಪಡಿಸಿಕೊಳ್ಳಲಿಲ್ಲ.

6.ನಿಪಿ-2 ನ್ನು ಠಾಣೆಯಲ್ಲೇ ನಮಗೆ ಅನುಕೂಲವಾಗುವ ರೀತಿಯಲ್ಲಿ ತಯಾರು ಮಾಡಿದ್ದು ಎಂದರೆ ಸರಿಯಲ್ಲ. ನಿಪಿ-4 ರಿಂದ 6 ಮತ್ತು 8ರಲ್ಲಿ ಚಾಸಾ-18ರವರು ಇದ್ದಾರೆಂದರೆ ನಿಜ. ಆ ಫೋಟೋಗಳನ್ನು ಯಾವ ಸಮಯದಲ್ಲಿ ಯಾವ ಕ್ಯಾಮೆರಾದಿಂದ ತೆಗೆದಿರುವುದು ಎಂದು ಕಂಡುಬರುತ್ತಿಲ್ಲ ಎಂದರೆ ಸರಿ. ಠಾಣಾ ಕ್ಯಾಮೆರಾದಲ್ಲಿ ತೆಗೆದಿದ್ದರೆ ಫೋಟೋದಲ್ಲಿ ದಿನಾಂಕ ಸಮಯ

ಬರುತ್ತಿತ್ತು ಎಂದರೆ ಸರಿ. ಆ ಫೋಟೋಗಳನ್ನು ಈ ಪ್ರಕರಣಕ್ಕೆ ಸೃಷ್ಟಿಸಿಕೊಂಡಿರುವುದು ಎಂದರೆ ಸರಿಯಲ್ಲ.

7.ಎಂ.ಒ.2 ಮತ್ತು 4 ಕಪ್ಪುಬಣ್ಣದ ಪಂಚೆ ಅಲ್ಲ ಎಂದರೆ ಸರಿಯಲ್ಲ ಎಂ.ಒ.2 ಮತ್ತು 4 ರಲ್ಲಿ ಕಂಡುಬರುವ ಚಿತ್ರಗಳು ಇದ್ದಲ್ಲಿ ಅದನ್ನು ಮಹಜರಿನಲ್ಲಿ ಕಾಣಿಸಲು ತೊಂದರೆ ಇತ್ತಾ ಎಂದರೆ ಸಾಕ್ಷಿಯು ಬಣ್ಣ ಮಾತ್ರ ಕಾಣಿಸಿದ್ದೇವೆ ಎನ್ನುತ್ತಾರೆ. ಎಂ.ಒ.2 ಮತ್ತು 4 ಕಪ್ಪುಬಣ್ಣದ ಪಂಚೆ ಅಲ್ಲ ಎಂದರೆ ಸರಿಯಲ್ಲ. ಅವುಗಳಲ್ಲಿ ಪಂಚರ ಸಹಿ ಇಲ್ಲ ಎಂದರೆ ಸರಿ. ಮೊಕದ್ದಮೆ ಸಂಖ್ಯೆ ಕೂಡ ಅಂಟಿಸಿಲ್ಲ ಎಂದರೆ ಸರಿ.

8.ಮಹಜರಿಗೆ ಹಾಜರಿದ್ದ ಎಲ್ಲರೂ ಕೂಡ ಸಹಿ ಹಾಕಿದ್ದೇವೆ. ನಾವು ಠಾಣೆಯಲ್ಲಿ ಸಹಿ ಹಾಕಿದ್ದು ಎಂದರೆ ಸರಿಯಲ್ಲ. ಎಂ.ಒ.1 ರಿಂದ 6ನ್ನು ಪ್ರಕರಣಕ್ಕಾಗಿ ಸೃಷ್ಟಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ.

9.ನನ್ನ ಮುಖ್ಯ ವಿಚಾರಣೆಯಲ್ಲಿ ನಾನು 2 ಮತ್ತು 3 ನೇ ಆರೋಪಿತರ ಬಳಿ ಸಿಕ್ಕಿದ ಗಾಂಜಾವನ್ನು ಬಿಳಿ ಬಟ್ಟೆಯಲ್ಲಿ ಹಾಕಿ ಪ್ಯಾಕು ಮಾಡಿರುತ್ತಾರೆಂದು ಹೇಳಿರುತ್ತೇನೆ, ಆ ಬಿಳಿ ಚೀಲ ನ್ಯಾಯಾಲಯದ ಮುಂದೆ ಇಲ್ಲ ಎಂದರೆ ಸರಿ. ಠಾಣಾ ಅಂಕಿಅಂಶಕ್ಕೋಸ್ಕರ ನಾನು ನಿಪಿ-1 ರ ದೂರನ್ನು ಸಲ್ಲಿಸಿದ್ದು ಎಂದರೆ ಸರಿಯಲ್ಲ. ನಿಪಿ-2 ನ್ನು ಠಾಣೆಯಲ್ಲಿ ಸೃಷ್ಟಿಸಿದ್ದು ಆದ್ದರಿಂದಲೇ ಪಂಚರಿಗೆ ನೋಟೀಸು ಜಾರಿಗೊಳಿಸಿಲ್ಲ ಎಂದರೆ ಸರಿಯಲ್ಲ. ಎಂ.ಒ.1 ರಿಂದ 6ನ್ನು ಪ್ರಕರಣಕ್ಕೋಸ್ಕರ ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ಎಂ.ಒ.7 ರಿಂದ 9ನ್ನು ಕೂಡ ಪ್ರಕರಣಕ್ಕಾಗಿ ಸೃಷ್ಟಿಸಿಕೊಂಡಿದ್ದೇವೆ, ಅದನ್ನು ಸ್ಥಳದಲ್ಲಿ ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಮೇಲಧಿಕಾರಿಗಳಿಗೆ ನಾನು ಮಾಹಿತಿ ತಿಳಿಸಿದ ವಿಚಾರ ಸಿಡಿಯಲ್ಲಿ ಇದೆಯಾ ಎಂದರೆ ಸಾಕ್ಷಿಯು ಆ ಸಿಡಿ ನನ್ನ ಬಳಿ ಇರುವುದಿಲ್ಲ ಎನ್ನುತ್ತಾರೆ. ಈ ಪ್ರಕರಣಕ್ಕೂ 2 ಮತ್ತು 3 ನೇ ಆರೋಪಿತರಿಗೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**ಪಾಟೀಸವಾಲುಃ 1ನೇ ಆರೋಪಿತರ ಪರ ಶ್ರೀ ಕೆ ಸಿ ಕೆ ವಕೀಲರಿಂದಃ**

(ಆರೋಪಿತರ ಪರ ವಕೀಲರು ಪಾಟೀಸವಾಲಿಗೆ ಸಮಯ ಕೋರಿದ್ದು, ಸಕಾರಣ

ಕಂಡುಬಾರದ ಕಾರಣ ಪಾಟೀಸವಾಲು ಇಲ್ಲವೆಂದು ಪರಿಗಣಿಸಲಾಗಿದೆ)

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್**

**ನ್ಯಾಯಾಧೀಶರು, ಹಾಸನ.**